# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***Spl.C.No.205/2018***

PW.1
CW.3

ದಿನಾಂಕಃ 15-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

| | |
|---|---|
| ಹೆಸರುಃ | ಶಿವಶಂಕರಪ್ಪ |
| ತಂದೆಯ ಹೆಸರುಃ | ಹೊನ್ನಪ್ಪ |
| ವಯಸ್ಸು | 40 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸಸ್ಥಳಃ | ಬಿಳಿಗೆರೆಪಾಳ್ಯ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿ ಮಹಜರ್ ನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ.1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ನಾನು ತಿಪಟೂರಿನ ಡಿವೈ.ಎಸ್.ಪಿ ಕಚೇರಿಯಲ್ಲಿ ಸುಮಾರು 4 ವರ್ಷಗಳ ಹಿಂದೆ ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಯಾವುದೋ ಗಲಾಟೆ ವಿಚಾರಕ್ಕೆ ಸಂಬಂದಿಸಿದಂತೆ ನಾನು ಡಿವೈ.ಎಸ್.ಪಿ ಕಚೇರಿಗೆ ಹೋಗಿದ್ದಾಗ ಕಚೇರಿಯಲ್ಲಿ ಪೊಲೀಸರು ನನಗೆ ಮಹಜರ್ ಗೆ ಸಹಿ ಮಾಡುವಂತೆ ಕೇಳಿದರು. ಆಗ ನಾನು ಸಹಿ ಮಾಡಿದ್ದೆ. ಯಾವುದೋ ಗಲಾಟೆ ವಿಚಾರಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ.1 ರಲ್ಲಿ ಏನು ಬರವಣಿಗೆ ಮಾಡಿದೆ ಗೊತ್ತಿಲ್ಲ.

2. ನಾನು ಬಿಳಿಗೆರೆ ಗ್ರಾಮದ ವಾಸಿ ಗೌರಮ್ಮ ಕೋಂ ಶಂಕರಪ್ಪನವರ ಮನೆಯ ಹೋಗಿಲ್ಲ ಅಲ್ಲಿ ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಮಾಡಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಗೌರಮ್ಮನವರ ಮನೆಯ ಮುಂದೆ ವಶಕ್ಕೆ ಪಡೆದಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಚಾಕುವನ್ನು ಮಹಜರ್ ವೇಳೆ ನೋಡಿರಲಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅಬಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸರ್ಕಾರಿ ಅಬಿಯೋಜಕರಿಂದ**

3. ದಿನಾಂಕಃ 27-2-2018 ರಂದು ಡಿವೈ.ಎಸ್.ಪಿ ರವರು ಬಿಳಿಗೆರೆ ಗ್ರಾಮದ ಗೌರಮ್ಮ ಕೋಂ ಶಂಕರಪ್ಪನವರ ಮನೆಯ ಮುಂದೆ ಗಲಾಟೆ ನಡೆದ ಸ್ಥಳದಲ್ಲಿ ಮಹಜರ್ ಮಾಡಿದ್ದು ಚಾಸಾಃ 1 ಸ್ಥಳ ತೋರಿಸಿದ ಮೇರೆಗೆ ನಿಪಿ.1 ರಂತೆ ಸ್ಥಳದಲ್ಲಿ ಮಹಜರ್ ಬರವಣಿಗೆ ಮಾಡಿ ನನ್ನ ಹಾಗೂ ಪಂಚರಾದ ಚಾಸಾಃ 4 ರವರ ಸಹಿಗಳನ್ನು ಪಡೆದಿದ್ದರು ಎಂದರೆ ಸರಿಯಲ್ಲ. ಮಹಜರ್ ವೇಳೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ಚಾಕುವನ್ನು ಚಾಸಾಃ 1 ರವರು ಹಾಜರುಪಡಿಸಿದ ಅದೇ ಚಾಕುವಿನಿಂದ ನಮಗೆ 2 ನೇ ಅರೋಪಿ ಪುನೀತ ಹಲ್ಲೆ ಮಾಡಿದ್ದು ಎಂದು ಹಾಜರುಪಡಿಸಿದ್ದು ನನ್ನ ಹಾಗೂ ಚಾಸಾಃ 4 ರವರ ಸಮಕ್ಷಮ ಅದನ್ನು ಅಮನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. 1 ನೇ ಅರೋಪಿ ನನಗೆ

ಪರಿಚಯಸ್ಥನಾಗಿದ್ದು ಅರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಅರೋಪಿಗಳ ಪರ ವಕೀಲರಿಂದ**

ಇಲ್ಲ.

**ಮರು ವಿಚಾರಣೆಃ** ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.